ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ನಗರ ಸಾರಿಗೆ ಸಂಸ್ಥೆಯ ಆಸ್ತಿ ಬಗ್ಗೆ.

(707) - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಬೆಂಗಳೂರು ಕೆಂಗೇರಿ ಉಪನಗರ ಪಕ್ಕದಲ್ಲಿರುವ ಆಸ್ತಿಯನ್ನು ಅತಿಕ್ರಮಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

2) ಈ ಸ್ಥಳದಲ್ಲಿದ್ದ ಅನೇಕ ಬಿಡಿ ಭಾಗಗಳು ಕಾಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಅಜೇಜ್ ಸೇಠ್ (ಸಾರಿಗೆ ಸಚಿವರು):

1) ಹೌದು.

2) ಹೌದು. ಈ ವಿಷಯದ ಬಗ್ಗೆ ತನಿಖೆ ನಡೆಯುತ್ತಿದೆ.

ರಾಜ್ಯದಲ್ಲಿ ಹೊಸ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆ ಬಗ್ಗೆ.

(708) - ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷದಲ್ಲಿ ಹೊಸ ಇಂಜಿನೀಯರಿಂಗ್ ಕಾಲೇಜುಗಳನ್ನು ಪಾಲಿಟೆಕ್ನಿಕ್‌ಗಳನ್ನು ತೆಗೆಯಲು ಸರ್ಕಾರ ಉದ್ದೇಶಿಸಿದೆಯೇ;

ಆ) ಇವುಗಳಿಗಾಗಿ ಖಾಸಗಿ ಕ್ಷೇತ್ರಗಳಿಂದ ಬಂದಿರುವ ಅರ್ಜಿಗಳೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಇಲ್ಲ.

ಆ) ಹೊಸ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಖಾಸಗಿಯವರಿಂದ ಅರ್ಜಿಗಳು ಬಂದಿರುವುದಿಲ್ಲ.

ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ಬಗ್ಗೆ.

(288) - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆಗೆ ನಿಗಧಿಪಡಿಸಿದ ಆದಾಯದ ಹಂತವೇನು?

ಆ) ಸಾವಿರಾರು ಬಡ ಜನರು ಈಗಿನ ಆದಾಯದ ಮಿತಿಯಲ್ಲಿ ಉಚಿತ ಪಡೆಯುವುದು ಸಾಧ್ಯವಾಗಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈಗ ಹಾಲಿ ಇರುವ ಆದಾಯದ ಮಿತಿಯನ್ನು ಕನಿಷ್ಟ ಪಕ್ಷ ವಾರ್ಷಿಕವಾಗಿ ರೂ. 12,000 ಕ್ಕೆ ಹೆಚ್ಚಿಸಲು ಪ್ರಸ್ತಾವನೆ ಇದೆಯೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು):

ಅ) ಆದಾಯದ ಹಂತ ವಸೂಲಿ ಮಾಡಬೇಕಾದ ದರಗಳು

1) ವಾರ್ಷಿಕ ರೂ. 10.000ದವರೆಗೆ ಉಚಿತ

2) ವಾರ್ಷಿಕ ರೂ. 10,001 ರಿಂದ ರೂ. 15,000 ದವರೆಗೆ ಶೇಕಡ 25ರಷ್ಟು

3) ವಾರ್ಷಿಕ ರೂ. 15.001 ರಿಂದ ರೂ. 20,000 ದವರೆಗೆ ಶೇಕಡ 50ರಷ್ಟು

4) ವಾರ್ಷಿಕ ರೂ. 20,001 ಮತ್ತು ಮೇಲ್ಪಟ್ಟು ಪೂರ್ತಿ